"ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ"

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570 006

**ಪ್ರವೇಶಾತಿ ವಿಭಾಗ**

ಅಂತರ್ಜಾಲ: www.ksoumysuru.ac.in ಇ-ಮೇಲ್ : admksou@gmail.com ದೂ.ಸಂ: 0821-2500981, 2519941, 8690544544

ಸಂಖ್ಯೆ: ಕರಾಮುವಿ/ಎಡಿಎಂ-1/74/ಯುಜಿ - ಬಿಇಡಿ ಪ್ರ.ನ./2025-26 ದಿನಾಂಕ: 26.03.2026

## ಸುತ್ತೋಲೆ

ವಿಷಯ : 2025-26ನೇ ಶೈಕ್ಷಣಿ ಸಾಲಿಗೆ (ಜನವರಿ ಆವೃತ್ತಿ) ದ್ವಿತೀಯ ಬಿ.ಇಡಿ ಶಿಕ್ಷಣಕ್ರಮದ ಪ್ರವೇಶಾತಿ ನವೀಕರಣ ಶುಲ್ಕವನ್ನು ಪಾವತಿಸುವ ಬಗೆಗೆ:

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 13.03.2026

* * * * *

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ 2021-22, 2022-23 ಮತ್ತು 2023-24ನೇ ಶೈಕ್ಷಣಿಕ ಸಾಲುಗಳ ಜನವರಿ ಆವೃತ್ತಿಗಳಲ್ಲಿ ಬಿ.ಇಡಿ ಶಿಕ್ಷಣಕ್ರಮಕ್ಕೆ ಪ್ರಥಮ ಸಾಲಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು 2025-26ನೇ ಸಾಲಿನ ಜನವರಿ ಆವೃತ್ತಿಯಲ್ಲಿ ಎರಡನೇ ವರ್ಷಕ್ಕೆ ನವೀಕರಣ **ಪ್ರವೇಶಾತಿ ಶುಲ್ಕ ಪಾವತಿಸಲು** ದಿನಾಂಕಗಳನ್ನು ನಿಗದಿಪಡಿಸಿದ್ದು, ಅಂತಿಮ ದಿನಾಂಕದೊಳಗೆ ನವೀಕರಣ ಶುಲ್ಕವನ್ನು ಪಾವತಿಸುವಂತೆ ಸೂಚಿಸುತ್ತಾ ಬೋಧನಾ ಶುಲ್ಕಗಳ ವಿವರವನ್ನು ಈ ಕೆಳಕಂಡಂತೆ ವಿವರಿಸಿ ಅಧಿಸೂಚಿಸಲಾಗಿದೆ.

| ತರಗತಿ | ಬೋಧನಾ ಶುಲ್ಕ (ರೂ.ಗಳಲ್ಲಿ) | ಬೋಧನಾ ಶುಲ್ಕವನ್ನು ಪಾವತಿಸಲು ಅಂತಿಮ ದಿನಾಂಕಗಳು | | |
|---|---|---|---|---|
| | | ದಂಡ ಶುಲ್ಕವಿಲ್ಲದೇ | ರೂ 200/- ದಂಡದೊಡನೆ | ರೂ 400/- ದಂಡದೊಡನೆ |
| 2021-22 ಮತ್ತು 2022-23 ರ ಜನವರಿ ಆವೃತ್ತಿಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ: | 30,250/- | **24.04.2026** | **02.05.2026** | **11.05.2026** |
| 2023-24 ರ ಜನವರಿ ಆವೃತ್ತಿಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ: | 33,300/- | | | |

- ವಿದ್ಯಾರ್ಥಿಗಳು ನವೀಕರಣ ಶುಲ್ಕವನ್ನು ಪಾವತಿಸಲು ವಿಶ್ವವಿದ್ಯಾನಿಲಯದ ಅಧಿಕೃತ ಅಂತರ್ಜಾಲ (ವೆಬ್‌ಸೈಟ್)ದಲ್ಲಿ (https://www.ksoumysuru.ac.in) ಲಾಗಿನ್ ಆಗಿ ಅರ್ಜಿಯನ್ನು ಭರ್ತಿ ಮಾಡಿ, ಆನ್‌ಲೈನ್ ಮೂಲಕವೇ ನವೀಕರಣ ಶುಲ್ಕವನ್ನು ಪಾವತಿಸಿ. ಭರ್ತಿ ಮಾಡಿದ ಅರ್ಜಿಯನ್ನು ಮತ್ತು ಶುಲ್ಕ ಪಾವತಿ ರಶೀತಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು.
- ಡೌನ್‌ಲೋಡ್ ಮಾಡಿಕೊಂಡ ಅರ್ಜಿ ಮತ್ತು ಶುಲ್ಕ ಪಾವತಿ ರಶೀತಿಯನ್ನು **ಕಡ್ಡಾಯವಾಗಿ ನಿರ್ದೇಶಕರು (ಪ್ರವೇಶಾತಿ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು – 570 006** ಇವರಿಗೆ ಖುದ್ದಾಗಿ ಸಲ್ಲಿಸುವುದು ಅಥವಾ ರಿಜಿಸ್ಟರ್ಡ್ ಅಂಚೆ / ಕೊರಿಯರ್ ಮೂಲಕವು ಕಳುಹಿಸಬೇಕು. ನಂತರ ಅಧ್ಯಯನ ಸಾಮಗ್ರಿಗಳನ್ನು ವಿತರಿಸಲಾಗುವುದು / ಕಳುಹಿಸಲಾಗುವುದು.
- ವಿಶ್ವವಿದ್ಯಾನಿಲಯಕ್ಕೆ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದುರುಗಿಸುವುದಾಗಲಿ/ ಹೊಂದಾಣಿಕೆ ಮಾಡಿಕೊಳ್ಳುವುದಾಗಲಿ ಮಾಡಲಾಗುವುದಿಲ್ಲ. ವಿಶ್ವವಿದ್ಯಾನಿಲಯ ಸೂಚಿಸಿರುವ ರೀತಿಯಲ್ಲಿ ಶುಲ್ಕವನ್ನು ಪಾವತಿಸದೆ ಬೇರೆ ವಿಧದಲ್ಲಿ ಪಾವತಿಸಿದ ಶುಲ್ಕಕ್ಕೆ ವಿಶ್ವವಿದ್ಯಾನಿಲಯ ಹೊಣೆಯಾಗುವುದಿಲ್ಲ.
- ಪ್ರಥಮ ವರ್ಷದ ಪರೀಕ್ಷೆಗಳಿಗೆ ಹಾಜರಾಗದಿದ್ದರೂ ಅಥವಾ ಆ ವರ್ಷದ ಯಾವ ವಿಷಯದಲ್ಲಿ ಉತ್ತೀರ್ಣರಾಗದಿದ್ದರೂ ಸಹ ದ್ವಿತೀಯ ಬಿ.ಇಡಿ ಪದವಿಯ ಶಿಕ್ಷಣ ಕ್ರಮಕ್ಕೆ ಸೇರಲು ಅರ್ಹರಾಗಿರುತ್ತಾರೆ.
- ಬೋಧನಾ ಶುಲ್ಕವವನ್ನು ಪಾವತಿಸಿದ ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿಯನ್ನು (ಐ.ಡಿ. ಕಾರ್ಡ್) ನವೀಕರಿಸಿಕೊಳ್ಳುವುದು
- ಪ್ರವೇಶಾತಿ ಅರ್ಜಿ ಹಾಗೂ ಶುಲ್ಕ ಪಾವತಿ ಚಲನ್‌ಗಳನ್ನು ಅಂಚೆ ಮೂಲಕ ರವಾನಿಸುವ ವಿದ್ಯಾರ್ಥಿಗಳಿಗೆ ಜರೂರಾಗಿ ಮತ್ತು ಖಚಿತವಾಗಿ ತಲುಪಿಸುವ ಉದ್ದೇಶದಿಂದ ಅಧ್ಯಯನ ಸಾಮಗ್ರಿಗಳನ್ನು ರಿಜಿಸ್ಟರ್ಡ್ ಅಂಚೆ ಮೂಲಕ ರವಾನಿಸಲಾಗುವುದು.
- **ವಿದ್ಯಾರ್ಥಿಗಳು ಬೋಧನಾ ಶುಲ್ಕ ಪಾವತಿಸಿದ ಅರ್ಜಿಯನ್ನು ನಿಗದಿತ ಸಮಯದಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸದೇ ತಮ್ಮ ಬಳಿಯಲ್ಲಿ ಇಟ್ಟುಕೊಂಡಲ್ಲಿ ನಿಗದಿತ ದಿನಾಂಕದ ನಂತರ ಬರುವ ಅಂತಹ ವಿದ್ಯಾರ್ಥಿಗಳ ಅರ್ಜಿಗಳನ್ನು ನೋಂದಣಿ ಮಾಡಿಕೊಳ್ಳಲಾಗುವುದಿಲ್ಲ.**
- ಖುದ್ದಾಗಿ ಸಿದ್ಧಪಾಠ ಪಡೆಯಲು ಇಚ್ಛಿಸಿ ನೇರವಾಗಿ ಅರ್ಜಿ ಸಲ್ಲಿಸಲು ಬರುವ ವಿದ್ಯಾರ್ಥಿಗಳು ಗುರುತಿನ ಪತ್ರ ಹಾಗೂ ಶುಲ್ಕ ಪಾವತಿಸಿದ ರಶೀತಿಯ ನಕಲು ಪ್ರತಿಯನ್ನು ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ.
- ವಿಶ್ವವಿದ್ಯಾನಿಲಯಕ್ಕೆ ನೋಂದಣಿ ಪಡೆದು, ಶಿಕ್ಷಣವನ್ನು ಒಂದು ವರ್ಷ ನಿಲ್ಲಿಸಿ ನಂತರ ಮತ್ತೆ ಮುಂದಿನ ತರಗತಿಗೆ ಸೇರಬಯಸುವ ವಿದ್ಯಾರ್ಥಿಗಳು ಬೋಧನಾ ಶುಲ್ಕದೊಂದಿಗೆ ಮರು ಪ್ರವೇಶಾತಿ ಶುಲ್ಕ ರೂ. 1,000/- ಗಳನ್ನು ಎರಡು ವರ್ಷ ಶಿಕ್ಷಣ ನಿಲ್ಲಿಸಿದವರು ಶುಲ್ಕ ರೂ. 2,000/- ಗಳನ್ನು ಪಾವತಿ ಮಾಡಬೇಕು. ಎರಡು ವರ್ಷಕ್ಕೂ ಹೆಚ್ಚು ಶಿಕ್ಷಣವನ್ನು ನಿಲ್ಲಿಸಿರುವ ವಿದ್ಯಾರ್ಥಿಗಳು ನವೀಕರಣ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ.
- ದ್ವಿತೀಯ ಬಿ.ಇಡಿ ತರಗತಿಯ ಪ್ರವೇಶಾತಿ ನವೀಕರಣಕ್ಕೆ ಅಂತಿಮ ಅವಕಾಶವಾಗಿರುವುದರಿಂದ ವಿದ್ಯಾರ್ಥಿಗಳು ತಪ್ಪದೇ ಇದರ ಸದುಪಯೋಗಪಡಿಸಿಕೊಳ್ಳುವುದು.

ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ಅಧಿಕೃತ ಅಂತರ್ಜಾಲ (ವೆಬ್‌ಸೈಟ್) (https://www.Ksou mysuru.ac.in)ನಲ್ಲಿ ವೀಕ್ಷಿಸಬಹುದು ಹಾಗೂ ಸಹಾಯವಾಣಿ ಕೇಂದ್ರದ ಸಂಖ್ಯೆ: 8690544544 ಅನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಕುಲಸಚಿವರು

ತೆರೆದ ಅಂಚೆ

ಭಾರತ ಸರ್ಕಾರದ ಸೇವೆಯಲ್ಲಿ

ಗೆ

. . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . .

ಇಂದ: ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU), ಮುಕ್ತಗಂಗೋತ್ರಿ, ಮೈಸೂರು – 570 006.